ದಿನಾಂಕಃ 07-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಎನ್ ವಕೀಲರಿಂದಃ

ನಾನು 1989 ರಲ್ಲಿ ಓಂ ಪ್ರಕಾಶ್ ಎನ್ನುವವರಿಂದ ನಿವೇಶನವನ್ನು ಖರೀದಿಸಿದ್ದು ತದ ನಂತರ ಸದರಿ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸಿದ್ದೆನೆ ಎಂದರೆ ಸರಿ. ಸದರಿ ಓಂ ಪ್ರಕಾಶ್ ರವರು ಸದರಿ ನಿವೇಶವನ್ನು ರಾಮ್‌ರಾವ್ ರವರಿಂದ 1989 ರಲ್ಲಿ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಖರೀದಿಸಿದ ನಿವೇಶನದ ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ ಮಹಾಲಿಂಗಪ್ಪನವರ ಜಾಗ, ಪಶ್ಚಿಮಕ್ಕೆ ಸ್ವಂತ ಜಾಗ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಪ್ಪಾಗಿದೆ ಎಂದು ನುಡಿಯುತ್ತಾರೆ, ಸಾಕ್ಷಿಗೆ ಈಗ ಸದರಿ ಕ್ರಯಪತ್ರದ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–7** ಎಂದು ಗುರುತಿಸಲಾಯಿತು. ನಾನು ಸದರಿ ಓ ಪ್ರಕಾಶ್ ರವರಿಂದ ಖರೀದಿಸಿದ ಕ್ರಯಪತ್ರದಲ್ಲಿ ಪಶ್ಚಿಮದ ಚೆಕ್ಕುಬಂದಿ ಓಣಿ ಎಂದು ನಮೂದು ಇರುತ್ತದೆ. ಸದರಿ ಪಶ್ಚಿಮದ ಚೆಕ್ಕುಬಂದಿಯನ್ನು ಯಾವ ದಾಖಲೆಗಳ ಆಧಾರದ ಮೇಲೆ ನಮೂದಿಸಿದ್ದೀರಿ ಎಂದರೆ ಸಾಕ್ಷಿ ಮೂಲ ಮಾಲೀಕರು ಓಣಿ ಎಂದು ಬಿಟ್ಟಿದ್ದರಿಂದ ಅದರ ಆಧಾರದ ಮೇಲೆ ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ, ಮೂಲ ಮಾಲೀಕರು ಸದರಿ ಪಶ್ಚಿಮಕ್ಕೆ ಓಣಿಯನ್ನು ಎಂದಿಗೂ ಬಿಟ್ಟಿಲ್ಲದೆ ಇದ್ದರು ಸಹ ನಾನು ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ನಾನು ಖರೀದಿಸಿದ 15 ಇಂಟು 30 ರ ಒಟ್ಟು ವಿಸ್ತೀರ್ಣದಲ್ಲಿ ಸಂಪೂರ್ಣವಾಗಿ ಕಟ್ಟಡ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 3 ಅಡಿ ಜಾಗದಲ್ಲಿ ಸಜ್ಜೆಯನ್ನು ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಜ್ಜೆ 15 ಇಂಟು 30 ರ ವಿಸ್ತೀರ್ಣವನ್ನು ಹೊರತುಪಡಿಸಿ ಬರುತ್ತದೆ ಎಂದರೆ ಸಾಕ್ಷಿ ಓಣಿಯಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಫೊಟೋವನ್ನು ತೋರಿಸಲಾಗಿ ಸದರಿ ಫೊಟೋದಲ್ಲಿ ಕಾಣಿಸುತ್ತಿರುವ ಸಜ್ಜೆಯೇ ನಾನು ಈಗ ಹೇಳಿದ ಸಜ್ಜೆ ಎಂದರೆ ಸರಿ. ಸಾಕ್ಷಿ ಸದರಿ ಫೊಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–8** ಎಂದು ಗುರುತಿಸಲಾಯಿತು. ಸದರಿ 3 ಅಡಿಯ ಸಜ್ಜೆ ನೆಲಭಾಗದಿಂದ ನಿರ್ಮಾಣಮಾಗಿಲ್ಲ ಮೇಲ್ಭಾಗದಲ್ಲಿದೆ ಎಂದರೆ ಸರಿ. ಸಾಕ್ಷಿಗೆ ಈಗ ಮತ್ತೊಂದು ಫೊಟೋವನ್ನು ತೋರಿಸಲಾಗಿ ಸದರಿ ಫೊಟೋದಲ್ಲಿ ಕಾಣಿಸುತ್ತಿರುವ ಸಜ್ಜೆಯೇ ನಾನು ಈಗ ಹೇಳಿದ ಸಜ್ಜೆ ಎಂದರೆ ಸರಿ. ಸಾಕ್ಷಿ ಸದರಿ ಫೊಟೋವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–9** ಎಂದು ಗುರುತಿಸಲಾಯಿತು. ಸದರಿ 3 ಅಡಿ ಜಾಗವನ್ನು ಮೂಲ ಮಾಲೀಕರಿಂದಾಗಲಿ ಅಥವಾ ತದನಂತರದ ಮಾಲೀಕರಿಂದಾಗಲಿ ಖರೀದಿಸಿದ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಮೊದಲನೇ ಅಂತಸ್ತಿಗೆ ಹೋಗಲು ಮೆಟ್ಟಿಲುಗಳನ್ನು ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಹಾಗಾಗಿ ಸದರಿ 3 ಅಡಿಗೆ ಸಂಬಂಧಿಸಿದಂತೆ ನಾನು ಮೂಲ ಮಾಲೀಕರಿಂದಾಗಲಿ ಅಥವಾ ತದನಂತರದ ಮಾಲೀಕರಿಂದಾಗಲಿ ಖರೀದಿಸಿಲ್ಲ ಎಂದರೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಒದಗಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು

ಸದರಿ 3 ಅಡಿ ಜಾಗವನ್ನು ಖರೀದಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಇದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಸದರಿ ಕಟ್ಟಡವನ್ನು ನಿರ್ಮಾಣ ಮಾಡುವ ಪೂರ್ವ ಪರವಾನಿಗೆ ಮತ್ತು ಕಂದಾಯ ರಶೀದಿಯನ್ನು ಪಡೆದಿರುತ್ತೇನೆ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ. ಸದರಿ ಪರವಾನಿಗೆಯಂತೆ ಎಷ್ಟು ವಿಸ್ತೀರ್ಣದಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿದ್ದೀರಿ ಎಂದರೆ ಸಾಕ್ಷಿ ಅಳತೆ ಪ್ರಕಾರ ಕಟ್ಟಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಟ್ಟಡ ನಿರ್ಮಾಣಕ್ಕೆ ಅನುಮೇದನೆ ಪಡೆದಿರುತ್ತೇನೆ. ಸದರಿ ಅನುಮೋದನೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ. ಸದರಿ 3 ಅಡಿ ಪ್ಯಾಸೇಜ್ ಜಾಗ ಸದರಿ ಶಿಥಿಲಾವಸ್ಥೆಯಲ್ಲಿದೆ ಎಂದರೆ ಸರಿ. ಹಾಗಾಗಿ ನಾವು ಸದರಿ ಪ್ಯಾಸೇಜ್ ನ್ನು ಉಪಯೋಗಿಸುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಪ್ಯಾಸೇಜ್ ನ್ನುನಾವು ಕಟ್ಟಡ ನಿರ್ಮಾಣ ಮಾಡುವ ಸಮಯಕ್ಕೆ ಕ ಟ್ಟಿದ್ದಲ್ಲ ತದನಂತರ ಕಟ್ಟಿದ್ದಂತಹ ಪ್ಯಾಸೇಜ್ ಎಂದರೆ ಸಾಕ್ಷಿ ಕಟ್ಟಡ ಕಟ್ಟುವ ಸಮಯಕ್ಕೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನೆಲಮಳಿಗೆಯಲ್ಲಿರುವ 15 ಇಂಟು 30 ವಿಸ್ತೀರ್ಣ ಮಾತ್ರ ಮೂಲ ಕಟ್ಟಡ ಎಂದರೆ ಸರಿಯಲ್ಲ. ಸದರಿ ಪ್ಯಾಸೇಜ್ ನ್ನು ರಾತ್ರೋರಾತ್ರಿ ತರಾತುರಿಯಲ್ಲಿ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೂಲ ಕಟ್ಟಡ ಸುಸ್ಥಿತಿಯಲ್ಲಿದ್ದು, ಪ್ಯಾಸೇಜ್ ತರಾತುರಿಯಲ್ಲಿ ನಿರ್ಮಾಣ ಮಾಡಿದ ಕಾರಣ ಶಿಥಿಲಾವಸ್ಥೆಗೆ ಬಂದಿದೆ ಎಂದರೆ ಸರಿಯಲ್ಲ.ವಾದಿಗಳಿಗೆ ಸೇರಿದ ಜಾಗವನ್ನು ತಪ್ಪಿಸುವ ಸಲುವಾಗಿ ನಾನು ರಾತ್ರೋರಾತ್ರಿ ಪ್ಯಾಸೇಜ್ ನ್ನು ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಕಟ್ಟಡದ ದಕ್ಷಿಣ ಮತ್ತು ಪೂರ್ವ ಭಾಗದಲ್ಲಿ ಮುಖ್ಯ ರಸ್ತೆಗೆ ಅಭಿಮುಖವಾಗಿ ಸ್ಟೇರ್ ಕೇಸ್ ಇದೆ ಎಂದರೆ ಸಾಕ್ಷಿ ಉತ್ತರ ಭಾಗದಲ್ಲಿದೆ ಎಂದು ನುಡಿಯುತ್ತಾರೆ. ಸದರಿ ಸ್ಟೇರ್ ಕೇಸ್ ಮುಖಾಂತರ 1 ಮತ್ತು 2 ನೇ ಮಹಡಿಗೆ ಹೋಗಬಹುದು ಎಂದರೆ ಸರಿ. ನೆಲಮಹಡಿ ಮತ್ತು ಮೊದಲನೇ ಮಹಡಿಯನ್ನು ಬಾಡಿಗೆಗೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನೆಲಮಹಡಿಯನ್ನು ಮಾತ್ರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಕಟ್ಟಡದ ಉತ್ತರ ಭಾಗಕ್ಕೆ ವಾದಿಯರಿಗೆ ಸಂಬಂಧಪಟ್ಟ ದಾವಾ ಎ ಷೆಡ್ಯೂಲ್ ಆಸ್ತಿ ಇದೆ ಎಂದರೆ ಸರಿ. ನಾನು ನನ್ನ ತಕರಾರಿನ 13 ನೇ ಪ್ಯಾರದಲ್ಲಿ ಉಲ್ಲೇಖಿಸಿರುವಂತೆ ಓಣಿ ಇರುವುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳಿದಂತೆ ಯಾವುದೇ ಓಣಿ ಇಲ್ಲದೆ ಇದ್ದರು ಸಹ ಸದರಿ ಪ್ಯಾಸೇಜ್ ವಾದಿಗಳು ತಮ್ಮ ಉಳಿದ ಜಾಗಕ್ಕೆ ಹೋಗಲು ಬಿಟ್ಟುಕೊಂಡಿರುವ ಜಾಗ ಎಂದರೆ ಸಾಕ್ಷಿ ಮೂಲ ಮಾಲೀಕರು ಇಬ್ಬರಿಗೂ ಓಡಾಡಲು ಬಿಟ್ಟಿರುವ ಜಾಗ ಎಂದು ನುಡಿಯುತ್ತಾರೆ. ಮೂಲ ಮಾಲೀಕರು ನಾನು ಹೇಳಿದಂತೆ ಯಾವುದೇ ಜಾಗವನ್ನು ಬಿಟ್ಟಿಲ್ಲದೆ ಇದ್ದರು ಸಹ ನಾನು ಈ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಮೂಲ ಮಾಲೀಕರು 37 ಇಂಟು 140 ಅಡಿಗೆ ಮಾಲೀಕರಾಗಿದ್ದು ಅದರಲ್ಲಿ ನನಗೆ 15 ಇಂಟು 30 ಅಡಿ ನಿವೇಶನವನ್ನಷ್ಟೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಯಾವುದೇ ನಿವೇಶನಗಳನ್ನು ಮೂಲ ಮಾಲೀಕರು

ಮಾಡಿಲ್ಲ ಮತ್ತು ಯಾವುದೇ ಪ್ಯಾಸೇಜ್ ನ್ನು ಬಿಟ್ಟಿಲ್ಲ ಮತ್ತು ಸದರಿ ಸ್ವತ್ತು ಏಕ ನಿವೇಶನವಾಗಿದೆ ಎಂದರೆ ಸರಿಯಲ್ಲ.

ಸದರಿ ಸ್ವತ್ತನ್ನು ಮೂಲ ಮಾಲೀಕರಿಂದ ದಿನೇಶಕುಮಾರ್ ಎನ್ನುವವರು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಮೂಲ ಮಾಲೀಕರು ದಿನೇಶಕುಮಾರ್ ಎನ್ನುವವರಿಗೆ ಮಾಡಿಕೊಟ್ಟದ ಕ್ರಯಪತ್ರದ ಮೂಲ ಪ್ರತಿ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ನೋಡಿದ್ದು ನಾನು ಖರೀದಿಮಾಡಿದ ನಂತರ ಮೂಲ ಮಾಲೀಕರು ಸದರಿ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ 2 ನೇ ಪುಟದಲ್ಲಿ ಉಲ್ಲೇಖವಿರುವಂತೆ ಪೂರ್ವಕ್ಕೆ ಮಹಾಲಿಂಗಪ್ಪನವರ ಖಾಲಿ ಜಾಗ ಮತ್ತು ಆರ್ ರಾಜಪ್ಪ/ಪ್ರತಿವಾದಿಯ ಜಾಗ ಎಂದು ನಮೂದು ಇದೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಎಲ್ಲಿಯೂ ಸಹ ಪೂರ್ವಕ್ಕೆ ಓಣಿ ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ 2 ನೇ ಪುಟದಲ್ಲಿನ ವಿವರವನ್ನು ಸಾಕ್ಷಿ ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಸದರಿ ಕ್ರಯಪತ್ರವನ್ನು ನಿಪಿ-10 ಎಂದು ಹಾಗೂ ಅದರಲ್ಲಿನ ಸಂಬಂಧಪಟ್ಟ ನಿಪಿ-10(ಎ) ಎಂದು ಗುರುತಿಸಲಾಯಿತು. ನನ್ನ ಸ್ವತ್ತಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳಲ್ಲಿ ಪಶ್ಚಿಮದ ಚೆಕ್ಕುಬಂದಿ ಓಣಿ ಎಂದು ಉಲ್ಲೇಖವಿಲ್ಲದ ಕಾರಣ ನಾನು ಸದರಿ ಕ್ರಯಪತ್ರ ಮತ್ತು ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಾಜರಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ 3 ಅಡಿ ಸಜ್ಜೆಯನ್ನು ತದನಂತರ ನಿರ್ಮಾಣ ಮಾಡಿರುತ್ತೇನೆ ಎಂದರೆ ಸಾಕ್ಷಿ ಮೊದಲನೇ ಮಹಡಿಯನ್ನು ಕಟ್ಟುವ ಸಮಯಕ್ಕೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂಧಿಸಿಂತೆ ಅಸಲು ದಾವಾ ನಂ 308/1989 ರಂತೆ ದಾವೆ ಚನ್ನಗಿರಿ ನ್ಯಾಯಾಲಯದಲ್ಲಿ ನಡೆದಿದ್ದು ಸದರಿ ದಾವೆಗೆ ಈ ದಾವೆಯ ವಾದಿಗಳು ಪಕ್ಷಗಾರರಾಗಿರಲಿಲ್ಲ ಎಂದರೆ ಸರಿ.

ನನ್ನ ತಕರಾರಿನ 8 ನೇ ಪ್ಯಾರದಲ್ಲಿ ಉಲ್ಲೇಖಿಸಿದಂತೆ ಮೂಲ ಮಾಲೀಕರು 16 ಸೈಟುಗಳನ್ನು ಮಾಡಿರುತ್ತಾರೆ ಎಂದು ಉಲ್ಲೇಖಿಸಿದ್ದು ಸದರಿ ಸಂಗತಿಗಳನ್ನು ಈ ದಾವೆಗಾಗಿ ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದೆರ ಸರಿಯಲ್ಲ. ಸದರಿ ಒಟ್ಟು ನಿವೇಶನಗಳಲ್ಲಿ 8-8 ನಿವೇಶನಗಳ ನಡುವೆ 7 ಅಡಿ ಪ್ಯಾಸೇಜ್ ಇದೆ ಎಂದು ನಮೂದಿಸಿದ್ದು ಆ ರೀತಿಯ ಪ್ಯಾಸೇಜ್ ಯಾವುದು ಇಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನಗಳಲ್ಲಿ ನಾನು ನಿವೇಶನ ಸಂಖ್ಯೆ 1 ನ್ನು ಖರೀದಿಸಿರುತ್ತೇನೆ ಎಂದು ಉಲ್ಲೇಖಿಸಿದ್ದು ಸದರಿ ಸೈಟ್ ಗಳಿಗೆ ಯಾವುದೇ ಸಂಖ್ಯೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಕರಾರಿನ 10 ರಿಂದ 14 ನೇ ಪ್ಯಾರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಮೂಲ ಮಾಲೀಕರಾದ ರಾಮರಾವ್ ರವರ 37 ಇಂಟು 140 ರ ಪೈಕಿ ನನ್ನ ನಿವೇಶನವಾದ 15 ಇಂಟು 30 ರ ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣಕ್ಕೆ ವಾದಿಗಳೇ ಸಂಪೂರ್ಣ ಮಾಲೀಕರ ಎಂದರೆ

ಸಾಕ್ಷಿ 7 ಅಡಿ ಪ್ಯಾಸೇಜ್ ನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣಕ್ಕೆ ಅವರೇ ಮಾಲೀಕರು ಎಂದು ನುಡಿಯುತ್ತಾರೆ. ಸದರಿ ರಾಮರಾವ್ ರವರು ಓಂಪ್ರಕಾಶ್ ರವರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಓಣಿ ಎಂದು ನಮೂದು ಇರದ ಕಾರಣ ಸದರಿ ಜಾಗದಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸದರಿ ಓ ಪ್ರಕಾಶ್ ರಾವ್‌ರವರಿಂದ ಕ್ರಯಪತ್ರ ಬರೆಸಿಕೊಳ್ಳುವಾಗ ಉದ್ದೇಶಪೂರ್ವಕವಾಗಿಯೇ ಪಶ್ಚಿಮ ದಿಕ್ಕಿನ ಚೆಕ್ಕುಬಂದಿಯನ್ನು ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನನ್ನ ಮತ್ತು ಮೂಲ ಮಾಲೀಕರ ನಡುವೆ ತಕರಾರು ಉಂಟಾಗಿತ್ತು ಎಂದರೆ ಸರಿ. ಸದರಿನೇಶ್ ಕುಮಾರ್ ರವರಿಂದ ವಾದಿಗಳು ದಾವಾಸ್ತಿಯನ್ನು 2005 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಇರಬಹುದು. ಸದರಿ ಖರೀದಿಯ ನಂತರ ವಾದಿಗಳು ದಾವಾಸ್ತಿಯನ್ನು 2013 ರಲ್ಲಿ ನೊಂದಾಯಿತ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ,

ಹಾಗಾಗಿ ದಾವಾ ಎ ಮತ್ತು ಬಿ ಷೆಡ್ಯೂಲ್ ಆಸ್ತಿಗೆ ವಾದಿಗಳೇ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ. ಸದರಿ ಎಲಾಲ ವಿಚಾರಗಳು ನನಗೆ ತಿಳಿದಿದ್ದರು ಸಹ ವಾದಿಗಳಿಗೆ ಸೇರಿದ 3 ಅಡಿ ಜಾಗವನ್ನು ಕಬಳಿಸುವ ಉದ್ದೇಶದಿಂದ ಅವರಿಗೆ ತೊಂದರೆ ಕೊಡುತ್ತಿದ್ದೆನೆ ಎಂದರೆ ಸರಿಯಲ್ಲ. 20-09-2017 ರಲ್ಲಿ ಸದರಿ 3 ಅಡಿ ಜಾಗದಲ್ಲಿ ನಾನು ಹೆಚ್ಚುವರಿಯಾಗಿ ಕಟ್ಟಡ ಕಟ್ಟಲು ಬಂದಾಗ ವಾದಿಗಳು ತಡೆದು ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿ ನಾನು ಪೈಪ್ ನ್ನು ರಿಪೇರಿ ಮಾಡಲು ಹೋದಾಗ ತಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 3 ಅಡಿ ಪ್ಯಾಸೇಜ್ ನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲದ ಕಾರಣ ಅದನ್ನು ವಾದಿಗಳಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಪೂರ್ವ ಮಾಲೀಕರಾದ ಓಂಪ್ರಕಾಶ್ ರವರು ಸೇರಿ ಪತ್ರವನು ಸೃಷ್ಟಿ ಮಾಡಿಕೊಂಡಿರುತ್ತೆವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು**)**

ಓ**.**ಹೇ**.**ಕೇ**.** ಸರಿ ಇದೆ**.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.